

ಪದೇ ತಿರುಗಿದ ಮೇಲೆ ಊಟಕ್ಕಾಗಿ ಮುಚ್ಚಿದ್ದ ಬಳೆ ಅಂಗಡಿಯೊಂದು ತೆರೆದುಕೊಂಡು ಅಮ್ಮನಿಗೆ ರಂಗೋಲಿ ಕಟ್ಟನ್ನು ಕೊಟ್ಟಾಗ, ಅಮ್ಮನಿಗಿಂತಲೂ ಹೆಚ್ಚು ನೆಮ್ಮದಿ ಕಂಡಿದ್ದು ಜೊತೆಗೆ ಬಂದಿದ್ದ ಹೆಂಗಸರಂತೆ.

ನನಗೆ ನೆನಪಿರುವಂತೆ ಅಮ್ಮನಿಗೆ ಅಲ್ಲಿಯವರೆಗೆ ಬರುತ್ತಿದ್ದುದು ಎರಡೇ ಎರಡು ರಂಗೋಲಿ. ಮೊದಲನೆಯದು, ಏಳು ಚುಕ್ಕಿ ಇಟ್ಟು ಆಮೇಲೆ ಆ ಕಡೆ ಈ ಕಡೆಯ ಚುಕ್ಕಿಯನ್ನು ಬಿಟ್ಟು ಕೆಳಗೆ ಐದು ಚುಕ್ಕಿ ಇಟ್ಟು, ಆಮೇಲೆ ಮೇಲಿನಂತೆ ಚುಕ್ಕಿ ಬಿಟ್ಟು ಮೂರು, ಕೊನೆಗೆ ಒಂದು ಚುಕ್ಕಿಗೆ ನಿಲ್ಲಿಸುವುದು. ಕೂತ ಒಂದು ಕಡೆಗೆ ಈ ನಾಲ್ಕು ಸಾಲುಗಳನ್ನು ಇಟ್ಟ ಮೇಲೆ ಅಮ್ಮ ಎದುರು ಬದಿಗೆ ಹೋಗಿ ಐದು, ಮೂರು, ಒಂದು ಚುಕ್ಕಿ ಇಡುತ್ತಿದ್ದಳು. ಈ ಚುಕ್ಕಿಗಳ ರಾಶಿಯಲ್ಲಿ ನಾಲ್ಕೂ ಮೂಲೆಗಳಲ್ಲಿ ಒಂಟಿಯಾಗಿರುವ ಚುಕ್ಕಿಗಳೇ ಸೊಡರಿನ (ದೀಪ) ಬುಡ. ಒಂಟಿ ಚುಕ್ಕಿ ಮತ್ತು ಮೇಲಿನ ಎರಡು ಚುಕ್ಕಿಗಳನ್ನು ಗೆರೆಗಳಿಂದ ಕೂಡಿಸಿಕೊಂಡರೆ ಒಂದು ಗುಂಡಿಗೆ (ಹಾರ್ಟ್ ಸಿಂಬಲ್) ಅಲ್ಲಿ ಮೂಡುತ್ತಿತ್ತು. ಈ ಗುಂಡಿಗೆಯ ಮೇಲಿನ ಚುಕ್ಕಿಯೇ ಸೊಡರಿನ ಬೆಳಕು, ಇಷ್ಟೇ. ನಾಲ್ಕು ಮೂಲೆಗಳಲ್ಲಿ ನಾಲ್ಕು ಸೊಡರುಗಳು ಮೂಡಿದ ಮೇಲೆ ನಟ್ಟನಡುವಿನ ಒಂದು ಚುಕ್ಕಿ ಮತ್ತು ಸುತ್ತಲಿನ ನಾಲ್ಕು ಚುಕ್ಕಿಗಳು ಉಳಿಯುತ್ತವೆ. ಅವನ್ನು ಬಿಡಿ ಬಿಡಿಯಾಗಿ ನಡುವಿನ ಚುಕ್ಕಿಗೆ ಹೂ ದಳಗಳಂತೆ ರಂಗೋಲಿ ಎಳೆದು ಕೂಡಿಸಿ ಬಿಟ್ಟರೆ ಮುಗಿಯಿತು, ಐದೇ ಎವೆಗಳಲ್ಲಿ (ನಿಮಿಷ) ರಂಗೋಲಿ ಅಣಿ.

ಆಗ ಅಮ್ಮನಿಗೆ ಗೊತ್ತಿದ್ದ ಎರಡನೆಯ ರಂಗೋಲಿ, ಆರು ಚುಕ್ಕಿ ಆರು ಸಾಲಿನದು. ಅದೂ ಕೂಡ ನಾಲ್ಕು ಸೊಡರುಗಳದ್ದೇ ರಂಗೋಲಿ. ಇಲ್ಲಿನ ಸೊಡರುಗಳಿಗೆ ಪಾಪ ಮೊದಲನೆಯ ರಂಗೋಲಿಯ ವಯ್ಯಾರವಿರಲಿಲ್ಲ. ಇವು ತ್ರಿಕೋನ ಪರಿಜೆಯ (ಆಕಾರ) ಸೊಡರುಗಳು. ಆರು ಚುಕ್ಕಿ ಆರು ಸಾಲಿಟ್ಟು, ಕೆಳಗಿನ ಸಾಲಿನಲ್ಲಿ ಬಲಗಡೆಯ ಮೂರನ್ನು ಜೋಡಿಸಿ, ಹಾಗೇ ಮೇಲೆ ಹೋಗಿ ಅಲ್ಲಿಗೆ ಮೇಲಿನ ಮೂರನ್ನು ಜೋಡಿಸಿ, ತಿರುಗಿ ಎಳೆತವನ್ನು ಮೊದಲು ಮಾಡಿದ್ದ ಚುಕ್ಕಿಗೆ ದಾರಿಯಲ್ಲಿರುವ ಚುಕ್ಕಿಗಳನ್ನು ಜೋಡಿಸಿಕೊಂಡು ಜಾರಿ ಬಂದರೆ ಮುಗಿಯಿತು, ಸೊಡರು. ಸೊಡರಿನ ಮೇಲೆ ಉಳಿದಿರುವ ಮೂರು ಚುಕ್ಕಿಗಳನ್ನು ಜಾರಿದ ಗೆರೆಯಲ್ಲಿರುವ ನಡುವಿನ ಚುಕ್ಕಿಗೆ ಚೌಕದಂತೆ ಗೆರೆಯೆಳೆದು ಸೇರಿಸಿ ಬಿಟ್ಟರೆ ಅದೇ ಸೊಡರಿನ ಬೆಳಕು. ನಾಲ್ಕೂ ಮೂಲೆಗಳಲ್ಲಿ ಇದನ್ನು ಮಾಡಿಬಿಟ್ಟರೆ ತ್ರಿಕೋನ ಮತ್ತು ಚೌಕಗಳಿಂದ ಮಾಡಲ್ಪಟ್ಟ ನಾಲ್ಕು ಸೊಡರುಗಳ ಡಬ್ಬಿ ಡಬ್ಬಿ ರಂಗೋಲಿ ಅಣಿ.

ಈ ರಂಗೋಲಿ ರಾಮಾಯಣವನ್ನು ಓದುತ್ತಿರುವ ನೀವು ಯಾರೇ ಆಗಿರಲಿ, ನಾನು ಮೇಲೆ ಹೇಳಿದಂತೆ ರಂಗೋಲಿ ಹಾಕಿ ನೋಡಬಹುದು. ನಾನು ಹೇಳಿದಕ್ಕಿಂತಲೂ ಸಾವಿರಪಟ್ಟು ಸುಳುವಾಗಿ (ಸುಲಭ) ಕೆಲವೇ ಎವೆಗಳಲ್ಲಿ ನೀವೇ ಬಿಡಿಸಿದ ರಂಗೋಲಿಗಳು ಮತ್ತು ಅವುಗಳಿಂದ ಹೊಮ್ಮುತ್ತಿರುವ ಬೆಳಕು ನಿಮ್ಮ ಕಣ್ಣು ಮತ್ತು ಎದೆಯನ್ನು ಬೆಳಗುತ್ತದೆ.

ರಂಗೋಲಿ ಕಟ್ಟು ಅಮ್ಮನಿಗೆ ನಿಧಿಯಂತೆ ಕಾಣುತ್ತಿತ್ತು. ರಂಗೋಲಿ ಕಟ್ಟನ್ನು ನೋಡಿ, ನಾಳು (ದಿನ) ನಾಳೂ ಬಗೆ ಬಗೆಯ ರಂಗೋಲಿಗಳಿಂದ ಮನೆಯ ಅಂಗಳವನ್ನು ಸಿಂಗರಿಸಿ ಓಣಿಯ ಹೆಂಗಸರ, 'ಆಕೀಗೆ ಬರಾದು ಎರಡೇ ರಂಗೋಲಿ' ಎಂಬ ಕೀಳಾಗಿ ಕಾಣುವ ಮಾತಿನಿಂದ ತಪ್ಪಿಸಿಕೊಳ್ಳಬೇಕು ಎಂಬುದು ಅಮ್ಮನ ಆಗಿನ ಗುರಿಯಾಗಿತ್ತು.

ಈ ನಡುವೆ ತನ್ನ ಒಪ್ಪವನ್ನು (ಸಹಿ) ಬಿಟ್ಟು ಬೇರೇನೂ ಬರೆಯಲು, ಓದಲು ಗೊತ್ತಿಲ್ಲದ ಅಮ್ಮ, ಮೊದಲ ಸಲ, 'ಶಾಲಿಯಿಂದ ಒರಾಕರ ಒಂದು ಬುಕ್ಕ ತಾಂಬ. ಗೆರಿ ಇರ್ಬಾರ್ದು. ನೂರ್ ಪೇಜಿಂದು ಸಾಕು' ಎಂದಾಗ ನನಗೆ ಆದ ಹಿಗ್ಗು ಅಷ್ಟಿಷ್ಟಲ್ಲ. ಅಮ್ಮನಿಗೆ ಬರಿಗೆಗಳನ್ನು (ಅಕ್ಷರ) ಹೇಳಿಕೊಟ್ಟು ತಾಯಿಗೆ ಓದಲು ಬರೆಯಲು ಕಲಿಸಿದ ನೆಲದ ಮೇಲಿನ ಕೆಲವೇ ಕೆಲವು ಮಕ್ಕಳ ಸಾಲಿಗೆ ನಾನೂ ಸೇರಿಕೊಳ್ಳುತ್ತೇನೆಂಬ ದೊಡ್ಡ ಕನಸನ್ನು ಹೊತ್ತು, ಅವಳೇ ಆಗೀಗ ಕೊಡುತ್ತಿದ್ದ ಒಂದೆರಡು ರೂಪಾಯಿಗಳನ್ನು ಉಳಿಸಿಟ್ಟುಕೊಂಡಿದ್ದನ್ನು ಸೇರಿಸಿ, ನೂರು ಪುಟಗಳದ್ದಲ್ಲ ಇನ್ನೂರು ಪುಟಗಳ ಬರೆಕಟ್ಟನ್ನು (ನೋಟ್‌ಬುಕ್) ತಂದು ಕೊಟ್ಟಿದ್ದೆ. ಆರನೆಯ ತರಗತಿಯಲ್ಲಿದ್ದ ನಾನು ಅವತ್ತಿನ ಕಲಿಮನೆ (ಶಾಲೆ) ಮುಗಿಸಿಕೊಂಡು ಬಂದವನು ಟ್ಯೂಶನ್ನಿಗೆ ಹೋಗಿ ಬಂದ ಮೇಲೆ ಅಮ್ಮನಿಗೆ ಅಆಇಈ ಹೇಳಿಕೊಟ್ಟರಾಯಿತು, ಯಾವಾಗ ನೋಡಿದರೂ ಓದು–ಬರೀ ಎಂದು ಹೇಳುವುದು ಸುಲಭ, ಆದರೆ ಓದುವುದು, ಬರೆಯುವುದು ಎಷ್ಟು ಕಷ್ಟ ಎಂದು ಅಮ್ಮನಿಗೆ ಇವತ್ತು ಗೊತ್ತಾಗುವುದು ಎಂದುಕೊಂಡು ನನ್ನಲ್ಲೇ ನಗುತ್ತಾ ಹೊರಟೆ. ತಿರುಗಿ ಬರುವ ದಾರಿಯಲ್ಲಿ, 'ಪ್ರವೀಣ, ತಾನು ಚೆನ್ನಾಗಿ ಓದೋದಷ್ಟೇ ಅಲ್ಲ, ಅವ್ರಮ್ಮುಗೂ ಓದಾದುನ್ನ ಬರಿಯಾದುನ್ನ ಕಲಿಸ್ಯಾನ' ಎಂದು ನನ್ನ ನೆಚ್ಚಿನ ಕಲಿಸುಗರಿಂದ (ಶಿಕ್ಷಕ) ಹೊಗಳಿಸಿಕೊಳ್ಳಲಿರುವ ಗಳಿಗೆ ಇನ್ನೇನು ಬಂದೇಬಿಟ್ಟಿತು ಎಂಬುದನ್ನು ಅರಿತು ಗುಂಡಿಗೆ ದೊಡ್ಡದಾಗಿತ್ತು. ಮನೆಗೆ ಬಂದು ನೋಡುವಷ್ಟರಲ್ಲಿ ಅಮ್ಮ ಆಗಲೇ ಹೆಚ್ಚುಕಮ್ಮಿ ಐವತ್ತು ರಂಗೋಲಿಗಳಿಂದ ಬರೆಕಟ್ಟನ್ನು ತುಂಬಿಸಿಬಿಟ್ಟಿದ್ದಳು! ಓದುವ ಬರೆಯುವ ಮಾತೇ ಇಲ್ಲ.

ಹೊಸ ರಂಗೋಲಿಯನ್ನು ಮನೆಯ ಅಂಗಳದಲ್ಲಿ ಬಿಡಿಸುವಾಗ ಅಮ್ಮನ ಮೊಗದಲ್ಲಿ ಮೊದಲ ಸಲ ಎಸ್‌ಎಸ್‌ಎಲ್‌ಸಿ ಒರೆತವನ್ನು (ಪರೀಕ್ಷೆ) ಬರೆಯುತ್ತಿರುವ ಹುಡುಗರ ತಳಮಳ ಇರುತ್ತಿತ್ತು. ನೋಡಿದವರು ಏನಂದುಕೊಳ್ಳುತ್ತಾರೆ ಎಂಬ ಕಾಳಜಿ ಹೆಚ್ಚಿಗೇ ಇರುತ್ತಿತ್ತು. ಬಿಡಿಸಿಯಾದ ಮೇಲೆ 'ಪ್ರವೀಣಾ' ಎಂದು ಕೂಗಿ ಕರೆದು, ರಂಗೋಲಿ ತೋರಿಸಿ, ಎಲ್ಲವೂ ಸರಿ ಇದೆ ಎಂಬಂತೆ ನಾನು ತಲೆಯಾಡಿಸಿದ ಮೇಲೆಯೇ ಅವಳಿಗೆ ನೆಮ್ಮದಿ ಸಿಗುತ್ತಿತ್ತು.

3

ರಂಗೋಲಿಯ ಒಡನಾಟದಲ್ಲಿರುವಾಗಲೇ ನನಗೆ ನನ್ನ ವಾರಿಗೆಯ ಹುಡುಗಿಯರ ಗಮನವನ್ನು ನನ್ನತ್ತ ಸೆಳೆಯಲು, ನನ್ನನ್ನು ಅವರು ತುಂಬು ನಲಿವಿನಿಂದ ತಾವಾಗೇ ಬಂದು ಮಾತಾಡಿಸುವಂತೆ ಮಾಡಲು ದೊಡ್ಡದೊಂದು ದಾರಿ ಹೊಳೆದಿತ್ತು. ಆ ದಾರಿಯು ನಾನಂದುಕೊಂಡ ಕಡೆಗೆ ಕರೆದುಕೊಂಡು ಹೋಗದಿದ್ದರೂ, ಹುಡುಗಿಯರನ್ನು ಮಾತಾಡಿಸಲು ಒಂದು ದೂಸರಾದರೂ (ಕಾರಣ) ಸಿಗುವಂತೆ ಮಾಡುತ್ತಿತ್ತು. ಅದೆಂದರೆ, ನಾನೂ ರಂಗೋಲಿ ಬಿಡಿಸುವುದ ಕಲಿಯುವುದು. ಅಮ್ಮ ರಂಗೋಲಿ ಬಿಡುತ್ತಿದ್ದ ಹೊತ್ತಿಗೆ ಸರಿಯಾಗಿ ನಾನು ಒಂದು ಬಟ್ಟಲಿನಲ್ಲಿ ಸ್ವಲ್ಪ ರಂಗೋಲಿ ಪುಡಿ ಹಿಡಿದು, ಹೋಗಿ ಚುಕ್ಕಿಗಳನ್ನು ಇಡಲತ್ತಿದೆ. ಅಮ್ಮ ಏನೂ ಅನ್ನದೇ ನನ್ನನ್ನೇ ನೋಡಿ ನಕ್ಕಳು, ಬೈಯದೇ ತನ್ನ ನೆಚ್ಚಿನ ಏಳು ಚುಕ್ಕಿ